# ಬೆಳ್ಳಿ ಆಭರಣದಲ್ಲೂ ಆ್ಯಂಟಿಕ್!



ಚಿನ್ನದ ಬೆಲೆ ಗಗನಕ್ಕೇರಿರುವಂತೆ ಬೆಳ್ಳಿಯೂ ಹಳದಿ ಲೋಹವನ್ನೇ ಹಿಂಬಾಲಿಸುತ್ತಿದೆ. ಅದೇ ರೀತಿ ಆಭರಣ ವೈವಿಧ್ಯದಲ್ಲೂ ಬೆಳ್ಳಿ ಒಡವೆಗಳು ಮಹಿಳೆಯರನ್ನು ಸೆಳೆಯುತ್ತಿವೆ. ಚಿನ್ನ ಕೊಳ್ಳಲು ಮುಗಿಬೀಳುವ ಮಹಿಳೆಯರು ಈಗ ಬೆಳ್ಳಿ ಒಡವೆಗಳನ್ನು ಬೆಂಬತ್ತಿದ್ದಾರೆ. ಇದರಲ್ಲೂ ಆ್ಯಂಟಿಕ್ ಆಭರಣಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು ಹೆಂಗಳೆಯರ ಮನಸೆಳೆಯುತ್ತಿವೆ.



■ ಕೃಷ್ಣವೇಣಿ ಪ್ರಸಾದ್ ಮುಳಿಯ

ಬೆಳ್ಳಿ ಬಿಳಿ ಬಣ್ಣದ ಆಭರಣ ಮಹಿಳೆಯರ ಮನಗೆಲ್ಲುತ್ತಿದೆ. ಸ್ವಚ್ಛ, ನವಿರು, ಉತ್ತಮ ಎಂಬ ಎಲ್ಲಾ ಅದ್ಭುತ ಮಾತುಗಳಿಗೆ ಈ ಒಡವೆ ಸೂಕ್ತ ಎಂಬುದು ಹೆಣ್ಣುಮಕ್ಕಳ ಅಭಿಮತ. ಯಾವುದೇ ಶುಭ ಕಾರ್ಯಗಳಿಗೆ ಬೆಳ್ಳಿ ಬೇಕು. ಹಿಂದಿನಿಂದಲೂ ದೇವರಿಗೆ ಪ್ರಸಾದ ಸಮರ್ಪಿಸಲು, ಮಕ್ಕಳಿಗೆ ತಿನಿಸುಗಳನ್ನು ಕೊಡಲು ಬೆಳ್ಳಿಯ ಪಾತ್ರೆಗಳನ್ನೇ ಬಳಸುತ್ತಾ ಬಂದಿದ್ದೇವೆ. ಮಕ್ಕಳು ಹುಟ್ಟಿದ ತಕ್ಷಣ ಕಾಲಿಗೆ ಗೆಜ್ಜೆ, ಕೈಗೆ ಬಳೆ ಬೆಳ್ಳಿಯದ್ದನ್ನೇ ತೊಡಿಸುತ್ತಿರುವುದು ಈ ಲೋಹದ ಮಹತ್ವ ಸಾರುತ್ತದೆ. ಬೆಳ್ಳಿ ನಮ್ಮ ಧನಾತ್ಮಕ ಶಕ್ತಿಯನ್ನು ವೃದ್ಧಿಸಿ ಆರೋಗ್ಯ ನೀಡುವಲ್ಲಿ ಒಂದು ಪ್ರಾಮುಖ್ಯವಾದ ಲೋಹ ಎಂಬುದು ವೈಜ್ಞಾನಿಕವಾಗಿಯೂ ಸಾಬೀತಾಗಿದೆ.

ಇಂದಿನ ಯುಗದಲ್ಲಿ ಚರ್ಮಕ್ಕೆ ಹಾನಿ ಮಾಡುವ ಲೋಹದ ಆಭರಣಗಳು ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಹೇರಳವಾಗಿ ಸಿಗುತ್ತಿವೆ. ಇವು ನೋಡಲು ಸುಂದರವಾಗಿದ್ದು ಕಣ್ಣಿಗೆ ಮುದ ನೀಡುತ್ತವೆ. ಆದರೆ ಅದರ ಬಣ್ಣ ಮಾಸಿ ಹಳತಾಗುತ್ತವೆ. ನಮ್ಮ ಕಣ್ಣಿಗೆ ಸುಂದರವಾಗಿ